ಬಂದಿದ್ದಕ್ಕೆ ಯಾವುದೇ ಬಲವಾದ ಕಾರಣ ಹೊಳೆಯಲಿಲ್ಲ. ಮೊದಲು ಅನುಮಾನಿಸುತ್ತಾನೆ, ನಂತರ ಮನಸ್ಸಿನಲ್ಲಿ ಕೋಲಾಹಲ ಉದ್ಭವವಾಗುತ್ತದೆ; ಕಡೆಗೆ ಇದೇ ಸರಿ ಎಂದು ಯೋಚಿಸುತ್ತಾನೆ.

"ಮೊದಲು ನೀವು ಹೇಳಿ, ತುಂಬಾ ದಿನಗಳ ನಂತರ ಭೇಟಿಯಾಗಿದ್ದೀರ."

"ನಡೀತಿದೆ; ಪರ್ವಾಗಿಲ್ಲ, ಯೂ ಸೀ."

"ನಡೀತಲೇ ಇರುತ್ತೆ. ಮತ್ತೇನು ಸಮಾಚಾರ?"

"ಯೂ ಸೀ – ಫಾದರ್ ಇನ್ ಲಾ ಎಕ್ಸ್‌ಪೈರ್ ಆದರು."

"ವ್ಹಾಟ್ ಡೂ ಯೂ ಮೀನ್? ವಯಸ್ಸಾಗಿತ್ತು! ನಲವತ್ತೈದು ವಯಸ್ಸಿನ ಮನುಷ್ಯನಿಗೆ ಮುದುಕ ಎನ್ನಲಾಗುವುದೇ, ಯೂ ಸೀ!"

"ಇವತ್ತು ಮುದುಕನೆಂದು ಎಲ್ಲರಿಗೂ ಹೇಳಬಹುದು, ಸಾಹೇಬರೇ; ಪ್ರಪಂಚದ ವ್ಯವಸ್ಥೆಯೇ ಹೀಗಿದೆ; ಬೆರಕೆ ಎಣ್ಣೆ, ಬೆರಕೆ ತುಪ್ಪ, ನೀರು ಹಾಲು ಕುಡಿದು ಆರೋಗ್ಯ ಹಾಳಾಗುತ್ತಿದೆ. ಹಣದ ಬಗ್ಗೆ ಯೋಚನೆ ಮಾಡಿ ಮಾಡಿ ಬೇಸರವಾಗುತ್ತೆ. ಆದರೆ ಈ ಯೋಚನೆಗಳು ನಿಮಗಿಲ್ಲ."

ಆ ಬಂಧುಗಳು ಅಪ್ರಸ್ತುತ ಎಂಬಂತೆ ಹೇಳಿದರು, "ಅದೆಲ್ಲಾ ಹೋಗಲಿ ಬಿಡಿ, ನಾವು ಸ್ವಲ್ಪ ಹೆಚ್ಚು ಪರ್ಸನಲ್ ಆಗ್ತಾ ಇದ್ದೇವೆ, ಯೂ ಸೀ."

"ಸರಿ, ಈಗ ಇಂಪರ್ಸನಲ್ ಆಗೋಣ. ನಿಮ್ಮ ಕೆಲಸ ಹೇಗೆ ನಡೀತಿದೆ?"

ಬಂಧುಗಳು ಮುಗುಳ್ನಕ್ಕು ಹೇಳಿದರು, "ನಮ್ಮ ಕೆಲಸವನ್ನು ನೀವು ಪತ್ರಿಕೆಯಲ್ಲಿ ಓದುತ್ತಿರಬಹುದು."

"ಓದುತ್ತೇನೆ, ಆದರೂ? ನೀವೇನು ಯೋಚಿಸುತ್ತೀರಿ?"

ಬಂಧುಗಳು ಮುಖ ಸಿಂಡರಿಸಿದರು. ನಂತರ ಗಂಭೀರತೆಯಿಂದ ಹೇಳಿದರು, "ಕೆಲಸ ಹೇಗೆ ನಡೆಯಬೇಕೋ ಹಾಗೆಯೇ ನಡೀತಿದೆ, ನಾನು ಇನ್ನೇನು ಯೋಚನೆ ಮಾಡಲು ಸಾಧ್ಯ?"

"ನಿಮ್ಮ ಕಲೆಕ್ಟರ್ ಹೇಗಿದ್ದಾರೆ?"

"ಕಲೆಕ್ಟರ್? ವ್ಹಾಟ್ ಡೂ ಯೂ ಮೀನ್? ಯೂ ಸೀ ಯಾರು ಕಲೆಕ್ಟರ್?"

ಒಮ್ಮೆಲೆ ಅಶೋಕನ ಧೈರ್ಯ ಉಡುಗಿತು. ಈ ವ್ಯಕ್ತಿ ಎ.ಸಿ.ಎಸ್.ಓ. ಸಹ ಅಲ್ಲವೆಂದು ಅನ್ನಿಸಿತು! ಇವನು ಬೇರೆ ವ್ಯಕ್ತಿಯೇ? ಅಥವಾ ಇನ್ಶ್ಯೂರೆನ್ಸ್‌ನವನೇ? "ನಮ್ಮ ಕೆಲಸವನ್ನು ನೀವು ಪತ್ರಿಕೆಯಲ್ಲಿ ಓದುತ್ತಲೇ ಇರ್ತೀರೇನೋ." ಅವರ ಕೈಯಲ್ಲಿ ಚರ್ಮದ ಚೀಲವಿದೆ. ಅವರು ಮುಂದೆ ಮುಂದೆ ಬಂದು ಮಾತನಾಡುವುದು, ಹಠಾತ್ತನೆ ಸಿಗರೇಟು ಚಾಚುವುದು, ಅಸಂಬದ್ಧ ಮಾತಿನ ಬಲೆ ಹೆಣೆಯುವುದು–ಇದರಲ್ಲಿ ಕೆಲವು ಕ್ಷಣಗಳು ಕಳೆದು ಹೋದವು. ಅಶೋಕ ರೇಗಿದ, "ಕ್ಷಮಿಸಿ, ಸಾರ್. ನೀವು ನಿಮ್ಮ ಹೆಸರು ಸ್ವಲ್ಪ ಹೇಳಿ? ನನಗೆ ನೆನಪಾಗುತ್ತಿಲ್ಲ."

ಬಂಧುಗಳು ಮುಖವನ್ನು ಉದ್ದ ಮಾಡಿ ಸೂ ಸೂ ಎನ್ನುತ್ತಾ ಎರಡು ನಿಮಿಷ ಗಾಳಿ ಹಾಕಿಕೊಂಡರು. ನಂತರ ತಮ್ಮ ದೊಡ್ಡ ದೊಡ್ಡ ಕಣ್ಣುಗಳನ್ನು ಅಶೋಕ್ ಬಾಬುವಿನ ಮುಖದ ಮೇಲೆ ನೆಟ್ಟು ಹೇಳಿದರು, "ಗುಡ್ ಹೆವೆನ್ಸ್–ಸೀ! ಎಷ್ಟು ವಿಚಿತ್ರ! ಮರೆತಿರ? ನಿಮ್ಮ ತಮ್ಮನಿಗೆ ನಾನು ಒಂದು ವರ್ಷ ಪಾಠ ಹೇಳಿದ್ದೆ."

"ಅವನಿಗೆ ಎಷ್ಟೋ ಜನ ಪಾಠ ಹೇಳಿದ್ದರು."

"ನಾವು ಒಟ್ಟಿಗೆ ಲಾ ಪರೀಕ್ಷೆ ಬರೆದಿದ್ದೆವು."

"ನಿಮ್ಮ ತಂದೆಯೊಂದಿಗೆ ನನಗೆ ತುಂಬಾ ಆತ್ಮೀಯತೆ..."

"ನಮ್ಮ ತಂದೆಯವರ ಮಿತ್ರರ ಸಂಖ್ಯೆಯನ್ನು ನೀವು ಕೇಳಿದರೆ, ನಿಮಗೆ ಆಶ್ಚರ್ಯವಾಗುತ್ತದೆ."

"ನಂತರ ಕಚೇರಿಗಳಿಗೆ ಭೇಟಿ ಕೊಡುವುದು–ನೀವೇನು ಹೇಳುತ್ತಿದ್ದೀರ, ನಿಮಗೇನೂ ನೆನಪಿಲ್ಲವೇ?" ಅವರ ಸ್ವಾಭಿಮಾನ, ಅವಮಾನದಿಂದಾಗಿ ಚೀತ್ಕರಿಸಿತು. ಆದರೆ ಅಶೋಕನ ಸಿಟ್ಟು ನೆತ್ತಿಗೇರುತ್ತಿತ್ತು.